2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ10/2021</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಯಾಸ್ಮಿನ್ ಬಾನು | ಪಿಡಬ್ಲೂ - 1 |
| ಗಂಡನ ಹೆಸರು | - | ಅನ್ವರ್ ಖಾನ್ | ಸಿಡಬ್ಲೂ -1 |
| ವಯಸ್ಸು | - | 40 ವರ್ಷ | |
| ಉದ್ಯೋಗ | - | ಗೃಹಿಣಿ | |
| ವಾಸ ಸ್ಥಳ | - | ಅಜ್ಜಂಪುರ | |

ದಿನಾಂಕಃ 05.11.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು. ಆತ ನನ್ನ ಅಳಿಯ. ಮೃತ ತಬಾರಕ್ ಬಾನು ನನ್ನ ಮಗಳು. ಚಾಸಾ.2 ನನ್ನ ತಂಗಿಯ ಗಂಡ. ಚಾಸಾ.3, ಚಾಸಾ.5, ಚಾಸಾ.6, ಚಾಸಾ.8 ರವರು ಗೊತ್ತು. ಚಾಸಾ.4 ನನ್ನ ಗಂಡ. ಚಾಸಾ.7, ಚಾಸಾ.9, ಚಾಸಾ.10, ಚಾಸಾ.11, ಚಾಸಾ.15, ಚಾಸಾ.16 ರವರು ನನ್ನ ಸಂಬಂಧಿಕರು. ಚಾಸಾ.12 ನನ್ನ ತಮ್ಮ. ಚಾಸಾ.13 ನನ್ನ ತಂದೆ. ಚಾಸಾ.14 ನನ್ನ ತಾಯಿ. ಅಂತಿಮ ವರದಿಯಲ್ಲಿ ಕೈಬಿಡಲಾಗಿರುವ 2 ಮತ್ತು 3 ನೇ ಆರೋಪಿತರು 1 ನೇ ಆರೋಪಿಯ ತಮ್ಮ ಮತ್ತು ಅಮ್ಮ.

2. ನನಗೆ ಇಬ್ಬರು ಮಕ್ಕಳು. ಅವರೆಂದರೆ ತಬಾರಕ್ ಬಾನು ಮತ್ತು ಮಜಲ್ ಖಾನ್. ದಿನಾಂಕ 18.07.2018 ರಂದು ನನ್ನ ಮಗಳಾದ ತಬಾರಕ್ ಬಾನು ರವರ ಮದುವೆಯನ್ನು ಆರೋಪಿ

ಅಬ್ದುಲ್ ರಜಾಕ್ ನೊಂದಿಗೆ ಗೌರಾಪುರ ಗ್ರಾಮದಲ್ಲಿರುವ ನನ್ನ ತಂದೆಯ ಮನೆಯ ಬಳಿ ನಮ್ಮ ಸಂಪ್ರದಾಯದ ಪ್ರಕಾರ ಮಾಡಿಕೊಟ್ಟಿದ್ದೆವು. ಮದುವೆಯಾದ ಬಳಿಕ ನನ್ನ ಮಗಳು ಮತ್ತು ಅಳಿಯ ಅಜ್ಜಂಪುರದ ಮಾರುತಿ ಬಡಾವಣೆಯಲ್ಲಿರುವ ನಮ್ಮ ಮನೆಯಲ್ಲಿ ವಾಸವಾಗಿದ್ದರು. ಆರೋಪಿ ಅಜ್ಜಂಪುರದಲ್ಲಿರುವ ಸತೀಶ್ ಎಂಬುವವರ ಗಾಡಿಗೆ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದನು. ಮದುವೆಯಾದ 2 ತಿಂಗಳ ಕಾಲ ನನ್ನ ಮಗಳು ಮತ್ತು ಅಳಿಯ ಚೆನ್ನಾಗಿ ಇದ್ದರು. ಮದುವೆಯ ಸಮಯದಲ್ಲಿ ಆರೋಪಿ ರೂ.50,000/- ವರದಕ್ಷಿಣೆಯನ್ನು ಕೊಡುವಂತೆ ಕೇಳಿದ್ದನು ಆಗ ನಾವು ಈಗ ಆಗುವುದಿಲ್ಲ ಮುಂದೆ ನೋಡುತ್ತೇವೆ ಎಂದು ಹೇಳಿದ್ದೆವು. ಮದುವೆಯಾದ 2 ತಿಂಗಳ ಬಳಿಕ ಆರೋಪಿ ನನಗೆ ಬೇರೆಯವರ ಗಾಡಿಗೆ ಹೋಗುವುದಕ್ಕೆ ಆಗುವುದಿಲ್ಲ ನಾನೇ ಸ್ವಂತ ಆಟೋ ತೆಗೆದುಕೊಳ್ಳುತ್ತೇನೆ ನನಗೆ ರೂ.50,000/- ಹಣವನ್ನು ಕೊಡಿ ಎಂದು ಒತ್ತಾಯಿಸುತ್ತಿದ್ದನು ಮತ್ತು ನನ್ನ ಮಗಳಿಗೆ ಕಿರುಕುಳ ಕೊಡುವುದಕ್ಕೆ ಪ್ರಾರಂಭಿಸಿದನು. ರೂ.50,000/- ವರದಕ್ಷಿಣೆ ಹಣವನ್ನು ಕೊಟ್ಟಿಲ್ಲವೆಂದು ಆರೋಪಿ ನನ್ನ ಮಗಳಿಗೆ ಕಿರುಕುಳ ಕೊಡುತ್ತಿದ್ದನು.

3. ನಂತರ ಅಜ್ಜಂಪುರದ ಅಂಬೇಡ್ಕರ್ ಬಡಾವಣೆಯಲ್ಲಿ ನಾನು ಆರೋಪಿ ಮತ್ತು ನನ್ನ ಮಗಳಿಗೆ ಒಂದು ಬಾಡಿಗೆ ಮನೆಯನ್ನು ಮಾಡಿಕೊಟ್ಟಿದ್ದೆನು. ಸದರಿ ಮನೆ ಚಂದ್ರಶೇಖರ್ ರವರಿಗೆ ಸೇರಿದ್ದು. ಸದರಿ ಬಾಡಿಗೆ ಮನೆಗೆ ನಾನು ರೂ.15,000/- ಮುಂಗಡ ಹಣವನ್ನು ಪಾವತಿಸಿದ್ದೆನು. ಅಲ್ಲಿಯೂ ಸಹ ಆರೋಪಿ

ನನ್ನ ಮಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ.

4. ದಿನಾಂಕ 09.05.2019 ರಂದು ನನ್ನ ಮಗಳು ಹೆಣ್ಣು ಮಗುವಿಗೆ ಜನ್ಮ ನೀಡಿದ್ದಳು. ದಿನಾಂಕ 16.09.2019 ರಂದು ರಾತ್ರಿ 9.00 ಗಂಟೆಗೆ ನನ್ನ ಮಗಳು ಮತ್ತು ನನ್ನ ಅಳಿಯ ಇಬ್ಬರು ನಮ್ಮ ಮನೆಗೆ ಬಂದಿದ್ದರು. ಆ ದಿನ ನಮ್ಮ ಮನೆಯಲ್ಲಿ ಊಟ ಮಾಡಿಕೊಂಡು ಅವರು ಅದೇ ದಿನ ರಾತ್ರಿ 10.30 ಗಂಟೆ ಸುಮಾರಿಗೆ ಅವರ ಬಾಡಿಗೆ ಮನೆಗೆ ಹೋದರು. ಅದೇ ದಿನ ರಾತ್ರಿ 2.30 ಗಂಟೆಯಿಂದ 3.00 ಗಂಟೆಯ ಒಳಗೆ ಆರೋಪಿ ನನ್ನ ಗಂಡನ ಮೊಬೈಲ್ ಗೆ ಕರೆ ಮಾಡಿದ್ದನು. ಆಗ ನಾನು ಆ ಕರೆಯನ್ನು ಸ್ವೀಕರಿಸಿದಾಗ ಆರೋಪಿ ನನ್ನ ಮಗಳಾದ ತಬಾರಕ್ ಬಾನು ಮಾತನಾಡುತ್ತಿಲ್ಲ, ಆಕೆಗೆ ಲೋ ಬೀಪಿಯಾಗಿ ಬಿದ್ದು ಹೋಗಿದ್ದಾಳೆಂದು ತಿಳಿಸಿದನು. ಆಗ ನಾನು, ನನ್ನ ಗಂಡ ಮತ್ತು ನನ್ನ ಮಗ ಎಲ್ಲರೂ ಸೇರಿ ನನ್ನ ಮಗಳು ಮತ್ತು ಅಳಿಯ ವಾಸವಿದ್ದ ಬಾಡಿಗೆ ಮನೆಗೆ ಹೋದೆವು. ಸದರಿ ಬಾಡಿಗೆ ಮನೆ ಆರ್ ಸಿ ಸಿ ಕಟ್ಟಡದ ಮೊದಲನೇ ಮಹಡಿಯಲ್ಲಿ ಇತ್ತು. ಕೆಳಗಡೆ ಮನೆಯಲ್ಲಿ ಮಾಲೀಕರು ವಾಸವಾಗಿದ್ದರು. ನಾವು ಅಲ್ಲಿಗೆ ಹೋದಾಗ ಮನೆಯ ಬಾಗಿಲು ತೆಗೆದಿತ್ತು, ಲೈಟ್ ಆಫ್ ಆಗಿತ್ತು. ಆರೋಪಿ ನನ್ನ ಮೊಮ್ಮಗಳನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ಅಳುತ್ತಿದ್ದನು ಮತ್ತು ನನ್ನ ಮಗಳು ಹಾಸಿಗೆಯ ಮೇಲೆ ಮಲಗಿದ್ದಳು. ಆರೋಪಿಯನ್ನು ವಿಚಾರಿಸಿದಾಗ ನನ್ನ ಮಗಳಿಗೆ ಲೋ ಬೀಪಿಯಾಗಿ ಆಕೆ ಮಾತನಾಡದೇ ಆಕೆ ಬಿದ್ದು ಹೋಗಿರುವುದಾಗಿ ಹೇಳಿದನು. ನಾವು ಶಾಕಿನಲ್ಲಿ ಆರೋಪಿ

ಹೇಳಿದ ಮಾತನ್ನೇ ನಂಬಿಕೊಂಡೆವು. ನಾನು ನನ್ನ ಮಗಳನ್ನು ಮಾತನಾಡಿಸಲು ಪ್ರಯತ್ನಪಟ್ಟೆನು ಆದರೆ ಆಕೆ ಮಾತನಾಡಲಿಲ್ಲ, ಆಕೆಗೆ ಉಸಿರು ಇರಲಿಲ್ಲ. ಆಗ ನಾನು ನನ್ನ ತಂದೆಗೆ ಫೋನ್ ಮಾಡಿದೆನು. ಆಗ ನನ್ನ ತಂದೆ, ತಾಯಿ ಮತ್ತು ನನ್ನ ದೊಡ್ಡಮ್ಮನ ಮಗ ಆಟೋ ತೆಗೆದುಕೊಂಡು ಬಂದರು. ಅದೇ ಆಟೋದಲ್ಲಿ ನಾವು ನನ್ನ ಮಗಳನ್ನು ಅಜ್ಜಂಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ವೈದ್ಯರು ನನ್ನ ಮಗಳನ್ನು ಪರೀಕ್ಷಿಸಿ ಆಕೆ ಮೃತಪಟ್ಟಿರುವುದಾಗಿ ತಿಳಿಸಿದರು.

5. ದಿನಾಂಕ 17.09.2019 ರಂದು ನಾವು ನಮ್ಮ ಸಂಪ್ರದಾಯದ ಪ್ರಕಾರ ಗೌರಾಪುರದಲ್ಲಿರುವ ನಮ್ಮ ಸ್ಮಶಾನದಲ್ಲಿ ನನ್ನ ಮಗಳನ್ನು ದಫನ್ ಮಾಡಿದೆವು. ನನ್ನ ಮೊಮ್ಮಗಳನ್ನು ನಾನೇ ನಮ್ಮ ಮನೆಗೆ ಕರೆದುಕೊಂಡು ಹೋದೆನು.

6. ಅದಾದ ಒಂದು ತಿಂಗಳ ಬಳಿಕ ನಾನು ನನ್ನ ಮಗಳು ಮತ್ತು ಅಳಿಯನಿಗೆ ಬಾಡಿಗೆ ಮನೆ ಮಾಡಿಕೊಡುವ ಸಮಯದಲ್ಲಿ ಮುಂಗಡವಾಗಿ ನೀಡಿದ್ದ ರೂ.15,000/- ಹಣವನ್ನು ವಾಪಾಸ್ಸು ಪಡೆದುಕೊಂಡು ನನ್ನ ಮೊಮ್ಮಗಳ ಹೆಸರಿನಲ್ಲಿ ಇಡುವ ಸಲುವಾಗಿ ಅದನ್ನು ಕೇಳಲು ಆರೋಪಿ ಮತ್ತು ನನ್ನ ಮಗಳು ವಾಸವಿದ್ದ ಮನೆಗೆ ಹೋಗಿದ್ದೆನು. ಆಗ ಆ ಮನೆಯ ಮಾಲೀಕರಾದ ಚಂದ್ರಶೇಖರ್ ರವರು ಸದರಿ ಮುಂಗಡ ಹಣವನ್ನು ವಾಪಾಸ್ಸು ಪಡೆದುಕೊಂಡು ಹೋಗಿರುವುದಾಗಿ ತಿಳಿಸಿದರು. ಆಗ ನಾನು ಆರೋಪಿಗೆ ಫೋನ್ ಮಾಡಿ ಮಾತನಾಡಬೇಕು ಬಾ ಎಂದು ಕರೆದೆನು. ಆಗ ಆತ ಮಾರನೇ ದಿನ ಬೆಳಿಗ್ಗೆ ನಮ್ಮ ಮನೆಗೆ

ಬಂದನು. ಆಗ ಮನೆಯಲ್ಲಿ ನಾನು, ನನ್ನ ಗಂಡ, ನನ್ನ ಮಗ, ನನ್ನ ಮೊಮ್ಮಗಳು ಇದ್ದೆವು. ಆಗ ನಾವು ಆರೋಪಿಯನ್ನು ಕುರಿತು ಮುಂಗಡ ಹಣವಾಗಿ ನೀಡಿದ್ದ ರೂ.15,000/- ಹಣವನ್ನು ಕೊಡುವಂತೆ ಕೇಳಿದೆವು. ಆಗ ಆರೋಪಿ ನನ್ನ ಮೊಮ್ಮಗುವನ್ನು ಆತನೊಂದಿಗೆ ಕಳುಹಿಸುವಂತೆ ಕೇಳಿದನು. ಆಗ ಆರೋಪಿ ನಿಮ್ಮ ಮಗಳಾದ ತಬಾರಕ್ ಬಾನುಳನ್ನು ರೂ.50,000/- ವರದಕ್ಷಿಣೆ ಹಣವನ್ನು ಕೊಡಲಿಲ್ಲವೆಂದು ಸಾಯಿಸಿದ್ದೇನೆ, ಈಗ ನೀವು ಏನು ಮಾಡಿಕೊಳ್ಳಲು ಆಗುವುದಿಲ್ಲ, ಆಕೆಯ ದೇಹವನ್ನು ತೆಗೆಯಲು ಆಗುವುದಿಲ್ಲ, ಏನು ಕಿತ್ತು ಕೊಳ್ಳುತ್ತೀರ ಎಂದು ಹೇಳಿದನು.

7. ದಿನಾಂಕ 16.09.2019 ರ ರಾತ್ರಿ ಆರೋಪಿ ನನ್ನ ಮಗಳ ಕಪಾಳಕ್ಕೆ ಹೊಡೆದಿದ್ದಾಗಿ ಮತ್ತು ಆಗ ಆಕೆ ಜ್ಞಾನ ತಪ್ಪಿ ಬಿದ್ದಾಗ ಆರೋಪಿ ತನ್ನ ತಾಯಿಯಾದ ಜಬೀರಾ ಬಾನು ರವರಿಗೆ ಫೋನ್ ಮಾಡಿ ನನ್ನ ಮಗಳು ಜ್ಞಾನ ತಪ್ಪಿ ಬಿದ್ದಿರುವುದಾಗಿ ಆಕೆಗೆ ತಿಳಿಸಿದಾಗ ಆಕೆ ಸೀರೆ ಇದ್ದರೆ ಆಕೆಗೆ ನೇಣು ಹಾಕು ಎಂದು ಹೇಳಿದ್ದಾಗಿ ಆರೋಪಿ ನಮಗೆ ತಿಳಿಸಿದನು. ಆ ಸಮಯದಲ್ಲಿ ಆರೋಪಿಯ ತಮ್ಮನಾದ ಸಯ್ಯದ್ ಗೌಸ್ ನನ್ನ ಮಗಳು ಮತ್ತು ಅಳಿಯ ವಾಸವಿದ್ದ ಬಾಡಿಗೆ ಮನೆಯ ಮೇಲೆ ಮಲಗಿಕೊಂಡಿದ್ದಾಗಿ ಮತ್ತು ಆರೋಪಿ ಆತನನ್ನು ಕರೆದುಕೊಂಡು ಬಂದು ಅವರಿಬ್ಬರು ಸೇರಿ ನನ್ನ ಮಗಳಿಗೆ ಸೀರೆಯಿಂದ ನೇಣು ಹಾಕಿದ್ದಾಗಿ ಆರೋಪಿ ನಮಗೆ ತಿಳಿಸಿದನು.

8. ನಂತರ ಆ ವಿಚಾರವನ್ನು ನಾನು ನನ್ನ ತಂದೆ, ನನ್ನ ತಾಯಿ, ನನ್ನ ತಂಗಿಯ ಗಂಡನಾದ ಚಾಸಾ.2 ರವರಿಗೆ ಫೋನ್ ಮಾಡಿ ತಿಳಿಸಿ, ಆ ಬಗ್ಗೆ ಚರ್ಚಿಸಿ, ದಿನಾಂಕ 17.10.2019 ರಂದು ಅಜ್ಜಂಪುರ

ಪೊಲೀಸ್ ಠಾಣೆಗೆ ಹೋಗಿ ಆರೋಪಿಯ ವಿರುದ್ಧ ದೂರು ಕೊಟ್ಟಿದ್ದೇನೆ. ಸದರಿ ದೂರನ್ನು ನಾನು ಹೇಳಿದಂತೆ ಚಾಸಾ.12 ಅಕ್ಬರ್ ಅಲಿ ಬರೆದುಕೊಟ್ಟಿದ್ದಾರೆ. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ.

9. ಸಾಕ್ಷಿಯು ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.1(ಎ) ಯಿಂದ ನಿಪಿ.1(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯ ಕಲಂ 12 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ನಿಪಿ.2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

10. ದೂರು ನೀಡಿದ ಮಾರನೇ ದಿನ ಪೊಲೀಸರು ಅಜ್ಜಂಪುರದ ಅಂಬೇಡ್ಕರ್ ಬಡಾವಣೆಯಲ್ಲಿ ನನ್ನ ಮಗಳು ಮತ್ತು ಆರೋಪಿ ಬಾಡಿಗೆಗೆ ವಾಸವಿದ್ದ ಮನೆಯ ಬಳಿ ಮಹಜರ್ ಗಾಗಿ ಬಂದಿದ್ದರು. ಆಗ ನಾನು, ಚಾಸಾ.2 ಸಗೀರ್ ಮತ್ತು ಅವರ ಸ್ನೇಹಿತರೊಬ್ಬರು ಅಲ್ಲಿಗೆ ಹೋಗಿದ್ದೆವು. ನಾನು ಪೊಲೀಸರಿಗೆ ಸದರಿ ಮನೆಯನ್ನು ತೋರಿಸಿ ಸದರಿ ಮನೆಯ ಬೆಡ್ ರೂಮಿನಲ್ಲಿ ನನ್ನ ಮಗಳು ಮೃತಪಟ್ಟಿದ್ದ ಸಮಯದಲ್ಲಿ ಆಕೆ ಹಾಸಿಗೆಯ ಮೇಲೆ ಮಲಗಿದ್ದ ಸ್ಥಳದಲ್ಲಿ ಘಟನೆ ನಡೆದಿರುವುದಾಗಿ ತಿಳಿಸಿದೆನು. ಅಲ್ಲಿ ಪೊಲೀಸರು ಮಹಜರ್ ಮಾಡಿಕೊಂಡು ಫೋಟೋಗಳನ್ನು ತೆಗೆದುಕೊಂಡು ನನ್ನ ಸಹಿಯನ್ನು ಪಡೆದುಕೊಂಡರು.

11. ಸದರಿ ಮಹಜರನ್ನು ಮತ್ತು ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಮಹಜರನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಮಹಜರನ್ನು ನಿಪಿ.3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದನ್ನು ಪಂಚನಾಮೆಯ ಸಮಯದಲ್ಲಿ ಪೊಲೀಸರು ತೆಗೆದುಕೊಂಡಿದ್ದಾಗಿ ನುಡಿದು, ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿ, ತನ್ನೊಂದಿಗೆ ಚಾಸಾ.2 ಸಗೀರ್ ಮತ್ತು ಆತನ ಸ್ನೇಹಿತ ಇರುವುದಾಗಿ ನುಡಿದು ಅವರೂ ಸಹ ಮಹಜರ್ ಗೆ ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ಸದರಿ ಫೋಟೋವನ್ನು ನಿಪಿ.4 ಎಂದು ಗುರುತಿಸಲಾಯಿತು.

12. ಮಹಜರ್ ಆದ ಮಾರನೇ ದಿನ ಮಹಿಳಾ ಪೊಲೀಸರೊಬ್ಬರು ನನ್ನನ್ನು ತರೀಕೆರೆ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ನ್ಯಾಯಾಧೀಶರು ನನ್ನನ್ನು ವಿಚಾರಿಸಿದರು, ಆಗ ನಾನು ಅವರಿಗೆ ಈ ದಿನ ಹೇಳಿದ ಎಲ್ಲಾ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ.

13. ನಮ್ಮ ಸಂಪ್ರದಾಯದ ಪ್ರಕಾರ ಹೆಣ್ಣು ಮಕ್ಕಳು ಸ್ಮಶಾನಕ್ಕೆ ಹೋಗುವಂತಿಲ್ಲ. ನನ್ನ ಮೊಮ್ಮಗಳನ್ನು ನಾನೇ ಸಾಕಿಕೊಂಡಿದ್ದೇನೆ. ಈಗ ಆಕೆಗೆ 3 ವರೆ ವರ್ಷ ವಯಸ್ಸಾಗಿದೆ.

<u>ಪಾಟೀ ಸವಾಲುಃ ಶ್ರೀ ಎನ್ ಹೆಚ್ ವೈ ಆರೋಪಿ ಪರ ವಕೀಲರಿಂದಃ</u>

14. ನನ್ನ ಮಗಳು ತಬಾರಕ್ ಬಾನು ಪ್ರಥಮ ಪಿಯುಸಿಯವರೆಗೆ ವ್ಯಾಸಂಗ ಮಾಡಿದ್ದಳು. ನಾನು 7 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ಆರೋಪಿ ನಿಮ್ಮ ಮಗಳನ್ನು ನೋಡಲು ಬಂದ ದಿನವೇ ನೀವು ನಿಮ್ಮ ಮಗಳ ಮದುವೆಯನ್ನು ನೆರವೇರಿಸಿದ್ದೀರಿ ಎಂದರೆ ಸಾಕ್ಷಿ ಮೊದಲಿಗೆ ಹೌದು ಎಂದು ನುಡಿದು ನಂತರ ಮೊದಲಿಗೆ ಆರೋಪಿಯ ತಾಯಿ ಹೆಣ್ಣು ನೋಡಲು ಬಂದಿದ್ದರು ನಂತರ ಅವರು ಎಂಗೇಜ್‌ಮೆಂಟ್ ಮಾಡಿಕೊಳ್ಳಲು ಬಂದ ದಿನದಂದು ಮದುವೆ ಮಾಡಿದ್ದೇವೆ ಎನ್ನುತ್ತಾರೆ. ಆರೋಪಿ ನಿಮ್ಮ ಮಗಳನ್ನು ನೋಡಲು ಬಂದ ದಿನವೇ ನೀವು ನಿಮ್ಮ ಮಗಳ ಮದುವೆಯನ್ನು ನೆರವೇರಿಸಿದ್ದೀರಿ ಎಂದರೆ ಸರಿಯಲ್ಲ.

15. ಮದುವೆಯಾದ ನಂತರ ನನ್ನ ಮಗಳು ಬಾಣಾವಾರದಲ್ಲಿರುವ ಆಕೆಯ ಗಂಡನ ಮನೆಯಲ್ಲಿ 15 ದಿನಗಳ ಕಾಲ ವಾಸವಾಗಿದ್ದಳು. ಆಗ ನೀವು ಬಾಣಾವಾರದಲ್ಲಿ ಯಾವುದೇ ಕೆಲಸ ಸಿಗುವುದಿಲ್ಲ ಅಜ್ಜಂಪುರದಲ್ಲಿಯೇ ಕೆಲಸ ಮಾಡಿಕೊಂಡು ಇರುವಂತೆ ಬಾ ಎಂದು ಆರೋಪಿಯನ್ನು ಕರೆದಿದ್ದೀರಿ ಎಂದರೆ ಸರಿಯಲ್ಲ. ನನ್ನ ಮಗಳು ಅಳಿಯ ಇಬ್ಬರು ನಮ್ಮ ಮನೆಯಲ್ಲಿ ನನ್ನ ಮಗಳಿಗೆ ಮಗು ಜನಿಸುವವರೆಗೂ ಸುಮಾರು 9 ತಿಂಗಳ ಕಾಲ ಇದ್ದರು. ಮದುವೆಯ ಸಮಯದಲ್ಲಿ ನಿಮ್ಮ ಮಗಳು ಚೆನ್ನಾಗಿ ಇರಲಿ ಎಂದು ನೀವೇ ರೂ.50,000/-ಹಣವನ್ನು

ಕೊಡುವುದಾಗಿ ಹೇಳಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ನಿಮ್ಮ ಮನೆಯಲ್ಲಿದ್ದ ಸಮಯದಲ್ಲಿ ಸತೀಶನ ಬಳಿ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದನು ಎಂದರೆ ಸರಿ.

16. ಮದುವೆಯಾದ 2 ತಿಂಗಳಿನಿಂದ ಆರೋಪಿ ನನ್ನ ಮಗಳಿಗೆ ಕಿರುಕುಳ ಕೊಡಲು ಪ್ರಾರಂಭಿಸಿದನು. ಆ ವಿಚಾರವನ್ನು ನಿಮ್ಮ ಮಗಳು ನಿಮಗೆ ಯಾವಾಗ ತಿಳಿಸಿದಳು ಎಂದರೆ ಸಾಕ್ಷಿ ಅವರು ಪ್ರತೀ ದಿನ ಜಗಳ ಮಾಡಿಕೊಳ್ಳುತ್ತಿದ್ದರು ಎನ್ನುತ್ತಾರೆ. ಆ ವಿಚಾರವಾಗಿ ನೀವು ಪಂಚಾಯ್ತಿ ಮಾಡಲು ಅಥವಾ ಪೊಲೀಸರಿಗೆ ದೂರು ನೀಡಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

17. ಆರೋಪಿ ಅಜ್ಜಂಪುರದ ಅಂಬೇಡ್ಕರ್ ಬಡಾವಣೆಯಲ್ಲಿ ದಿನಾಂಕ 13.09.2019 ರಂದು ಬಾಡಿಗೆ ಮನೆಯನ್ನು ಮಾಡಿಕೊಂಡು ನಿಮ್ಮ ಮಗಳನ್ನು ಕರೆದುಕೊಂಡು ಹೋದನು ಎಂದರೆ ಸರಿ. ನೀವು ಮೊದಲ ಬಾರಿಗೆ ಆ ಮನೆಗೆ ಯಾವಾಗ ಹೋದಿರಿ ಎಂದರೆ ಸಾಕ್ಷಿ ಅದೇ ದಿನ ಅಂದರೆ ದಿನಾಂಕ 13.09.2019 ರಂದು ಹೋಗಿದ್ದೇನೆ ಎನ್ನುತ್ತಾರೆ. ನಿಮ್ಮ ಮಗಳು ಗರ್ಭಿಣಿಯಾಗಿದ್ದ ಸಮಯದಲ್ಲಿ 2-3 ಬಾರಿ ತಲೆ ಸುತ್ತಿ ಬಿದ್ದಿದ್ದಳು ಎಂದರೆ ಸರಿಯಲ್ಲ. ನಿಮ್ಮ ಮಗಳಿಗೆ ಲೋ ಬೀಪಿ ಇತ್ತು ಎಂದರೆ ಸರಿಯಲ್ಲ.

18. ನಿಮ್ಮ ಮಗಳು ಮೃತಪಡುವ ರಾತ್ರಿ ನಿಮ್ಮ ಮನೆಗೆ ಬಂದಿದ್ದ ಸಮಯದಲ್ಲಿ ನಿಮ್ಮ ಮಗಳು ಮತ್ತು ಅಳಿಯ ಇಬ್ಬರು ಚೆನ್ನಾಗಿ ಮಾತನಾಡಿಕೊಂಡು, ಊಟ ಮಾಡಿಕೊಂಡು ಹೋದರು ಎಂದರೆ ಸರಿ. ಅಂಬೇಡ್ಕರ್ ಬಡಾವಣೆ ಅಜ್ಜಂಪುರ ಪೊಲೀಸ್

ಠಾಣೆಯ ಹಿಂಭಾಗ ಬರುತ್ತದೆ ಎಂದರೆ ಸರಿ. ಸದರಿ ಬಡಾವಣೆಯಲ್ಲಿ ನಿಮ್ಮ ಮಗಳು ಮತ್ತು ಅಳಿಯ ವಾಸವಿದ್ದ ಬಾಡಿಗೆ ಮನೆ ಪೊಲೀಸ್ ಠಾಣೆಯಿಂದ 200 ಮೀಟರ್ ಆಗುತ್ತದೆ. ಸದರಿ ಮನೆಯ ಕೆಳಗಡೆ ಆ ಮನೆಯ ಮಾಲೀಕರಾದ ಚಂದ್ರಶೇಖರ್ ರವರು ವಾಸವಾಗಿದ್ದಾರೆ ಎಂದರೆ ಸರಿ. ನಿಮ್ಮ ಮಗಳು ಮತ್ತು ನಿಮ್ಮ ಅಳಿಯನ ಮನೆಯಲ್ಲಿ ಏನಾದರೂ ಗಲಾಟೆಯಾದರೆ ಸದರಿ ಚಂದ್ರಶೇಖರ್ ರವರ ಮನೆವರಿಗೆ ಕೇಳಿಸುತ್ತದೆ ಎಂದರೆ ಸರಿ.

(ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

<u>ಮರು ವಿಚಾರಣೆ ಇಲ್ಲಃ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.